# ಹೊಸತು

## ಲೋಟಸ್ ಆಭರಣ ಸಂಗ್ರಹ



ಕರಾಟ್‌ಲೇನ್ ಜ್ಯುವೆಲ್ಲರಿ ಇದೀಗ ಕಮಲವನ್ನೊಳಗೊಂಡ ಹೊಸ ವಿನ್ಯಾಸದ ಆಭರಣ ಸಂಗ್ರಹವನ್ನು 'ಲೋಟಸ್ ಕಲೆಕ್ಷನ್' ಹೆಸರಿನಲ್ಲಿ ಹೊರತಂದಿದೆ. ಕಿವಿಯೋಲೆ, ಉಂಗುರ, ಬ್ರೇಸ್‌ಲೆಟ್, ನೆಕ್ಲೆಸ್ ಮುಂತಾದ ಒಡವೆಗಳು ಈ ಸಂಗ್ರಹದಲ್ಲಿದ್ದು ನೋಡಲು ಆಕರ್ಷಕವಾಗಿದೆ. 18 ಕ್ಯಾರಟ್ ಚಿನ್ನದಲ್ಲಿ ತಯಾರಿಸಲಾಗಿದ್ದು ಬೆಲೆ 20,500 ರೂಪಾಯಿಗಳಿಂದ ಒಂದು ಲಕ್ಷದ 11,500 ರೂಪಾಯಿ.

ಮಾಹಿತಿಗೆ: 9820224440




## ಹೊಸ ಅವತಾರದ ಶಿಂಗಾರ್ ಕುಂಕುಮ

ಸುಮಾರು ಐವತ್ತು ವರ್ಷಗಳ ಇತಿಹಾಸವಿರುವ ಶಿಂಗಾರ್ ಕುಂಕುಮ ಇದೀಗ ಹೊಸ ಅವತಾರದಲ್ಲಿ ಮಾರುಕಟ್ಟೆಗೆ ಬಂದಿದೆ. ಸಾಂಪ್ರದಾಯಿಕ ಲುಕ್ ಕೊಡುವ ಶಿಂಗಾರ ಕುಂಕುಮ ಹಚ್ಚಿದರೆ ಹಣೆಯ ಮೇಲೆ ಯಾವುದೇ ಕಲೆ, ಕಡಿತ, ಬಿಳಿ ಪ್ಯಾಚ್‌ಗಳು ಉಂಟಾಗುವುದಿಲ್ಲ. ಇದು ಚರ್ಮ ತಜ್ಞರಿಂದ ಪ್ರಮಾಣಿತವಾದದ್ದು ಎಂದು ಕಂಪೆನಿ ಹೇಳಿದೆ.

ತೇವಾಂಶ ಉಳಿಸಿಕೊಳ್ಳುವ ಸಲುವಾಗಿ ಈಗ ಹೊಸದಾಗಿ ಬಂದಿರುವ ಶಿಂಗಾರ್ ಕುಂಕುಮ್‌ಗೆ ಬಾದಾಮಿ ಮತ್ತು ಅಲೊವೆರಾ ದ ಸಾರಗಳನ್ನು ಬಳಸಿಕೊಳ್ಳಲಾಗಿದೆ. ಇದು ಆ್ಯಂಟಿ ಬ್ಯಾಕ್ಟೀರಿಯಲ್ ಆಗಿ ಕೆಲಸ ಮಾಡುತ್ತದೆ ಎಂಬುದು ಕಂಪೆನಿ ವಿವರಣೆ. ಬೆಲೆ 15 ರೂಪಾಯಿ. ಎಲ್ಲ ಮಳಿಗೆಗಳಲ್ಲಿ, ಫ್ಯಾನ್ಸಿ ಸ್ಟೋರ್‌ಗಳಲ್ಲಿ ಸಿಗುತ್ತದೆ.

ಮಾಹಿತಿಗೆ: 9820224440




## ವಿಚಿ ಅಕ್ವಾಲಿಯ ಸೆರಮ್

ಸೌಂದರ್ಯ ವರ್ಧಕ ಕಂಪೆನಿ ವಿಚಿ ಅಕ್ವಾಲಿಯ ಥೆರ್ಮಲ್ ಸೆರಮ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ತ್ವಚೆ ನಿಸ್ತೇಜಗೊಳ್ಳುವುದು, ಒಣಗಿದಂತಾಗುವುದು ಮುಂತಾದ ಚರ್ಮದ ಸಮಸ್ಯೆಗೆ ವಿಚಿ ಸೂಕ್ತ ಪರಿಹಾರ ಒದಗಿಸಿದೆ. ದೀರ್ಘ ಕಾಲ ಕೆಲಸ, ಹೊಗೆ ಧೂಳು ಮುಂತಾದವುಗಳಿಂದ ಕಲುಷಿತಗೊಂಡ ವಾತಾವರಣದಿಂದ ತ್ವಚೆಯ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ. ಇದಕ್ಕೆ ವಿಚಿ ಸೆರಮ್ ಉತ್ತಮ ಪರಿಹಾರ ಎಂದು ಕಂಪೆನಿ ಹೇಳಿದೆ.

30 ಎಂಎಲ್ ಬಾಟಲಿಗೆ 1800 ರೂಪಾಯಿ. ಮಾಹಿತಿಗೆ: 9619691940

## ಪಾರ್ಕ್ ಅವೆನ್ಯು ಡಿಯೊಡರೆಂಟ್




ಜೆ.ಕೆ. ಹೆಲೆನ್ ಕರ್ಟಿಸ್ ಕಂಪೆನಿ ಪುರುಷರಿಗಾಗಿ ಹೊಸ ಬಗೆಯ ಪಾರ್ಕ್ ಅವೆನ್ಯು ಡಿಯೊಡರೆಂಟ್ ಒಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು ಬೆವರಿನ ವಾಸನೆ ಹೋಗಲಾಡಿಸಿ ದಿನವಿಡೀ ಉಲ್ಲಾಸದಿಂದ ಇರುವಂತೆ ಮಾಡುತ್ತದೆ. ಹೊರೈಜನ್, ಮಾರ್ಕ್, ಕೂಲ್ ಬ್ಲೂ, ಗುಡ್ ಮಾರ್ನಿಂಗ್, ಡೈವ್, ಟಾನ್ಕ್ವಿಲ್, ಸ್ಟಾರ್ಮ್, ಬಿಲೀವ್ ಹೀಗೆ ಒಟ್ಟು ಎಂಟು ವೈವಿಧ್ಯಗಳಲ್ಲಿ ಲಭ್ಯ. 100 ಗ್ರಾಂ ಬಾಟಲಿ ಬೆಲೆ 195 ರೂಪಾಯಿ. ಪ್ರಮುಖ ಮಳಿಗೆಗಳಲ್ಲಿ ಲಭ್ಯ.

## ಪೂಮ ಇವೊಸ್ಪೀಡ್ ಬೂಟ್

ಪಾದರಕ್ಷೆ, ಉಡುಪುಗಳಿಗೆ ಹೆಸರಾದ ಬ್ರ್ಯಾಂಡೆಡ್ ಕಂಪೆನಿ ಪೂಮ ಕ್ರೀಡಾಪಟುಗಳ ಅನುಕೂಲಕ್ಕಾಗಿ ಇದೀಗ ಇವೊಸ್ಪೀಡ್ ಬೂಟ್ಸ್ ಸಂಗ್ರಹವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಗಾಢ ಕೆಂಪು ಬಣ್ಣದಿಂದ ಕೂಡಿದ ಈ ಶೂ ಹಗುರವಾಗಿದ್ದು, ಧರಿಸಲು ಆರಾಮದಾಯಕವಾಗಿದೆ.

ಬೆಲೆ 13,999 ರೂಪಾಯಿ.

